ರೇಷ್ಮೆ ಇಲಾಖೆಯಲ್ಲಿ ಸೃಜಿಸಿರುವ ಹುದ್ದೆಗಳು.

1234(1100) ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) :— ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ರೇಷ್ಮೆ ಇಲಾಖೆಯಲ್ಲಿ ಚಾಮರಾಜನಗರ ಜಿಲ್ಲೆಯು ಸೇರಿದಂತೆ ನೂತನವಾಗಿ ಸೃಜಿಸಿರುವ ಹುದ್ದೆಗಳು ಎಷ್ಟು? ಯಾವ ಯಾವ ಹುದ್ದೆಗಳನ್ನು ಸೃಜಿಸಲಾಗಿದೆ, ಇದಕ್ಕೆ ಕಾರಣಗಳೇನು?

(ಆ) ಹುದ್ದೆಗಳನ್ನು ಸೃಜಿಸುವ ತೀರ್ಮಾನವನ್ನು ಯಾವಾಗ ಕೈಗೊಳ್ಳಲಾಯಿತು; ಸದರಿ ಹುದ್ದೆಗಳ ಅಗತ್ಯವಿತ್ತೆ (ವಿವರ ನೀಡುವುದು)

(ಇ) ಚಾಮರಾಜನಗರ ಜಿಲ್ಲೆಯಲ್ಲಿ ನೂತನ ಜಿಲ್ಲಾ ಸಂಕೀರ್ಣ ನಿರ್ಮಾಣಕ್ಕಾಗಿ ರೇಷ್ಮೆ ಇಲಾಖೆಯು ತನ್ನ ಇಲಾಖೆಯ ವ್ಯಾಪ್ತಿಯ ಜಾಗವನ್ನು ನೀಡಿದೆಯೇ?

(ಈ) ಸರ್ಕಾರಕ್ಕೆ ನೀಡಿರುವ ಈ ಜಾಗದ ವಿಸ್ತೀರ್ಣವೆಷ್ಟು; ಯಾವಾಗ ನೀಡಲಾಯಿತು? (ಪೂರ್ಣ ವಿವರ ನೀಡುವುದು)

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :—

(ಅ) ಯಾವುದೇ ಹೊಸ ಹುದ್ದೆಗಳನ್ನು ಸೃಜಿಸಿರುವುದಿಲ್ಲ.

(ಆ) ಉದ್ಭವಿಸುವುದಿಲ್ಲ.

(ಇ) ರೇಷ್ಮೆ ಇಲಾಖೆ ಕ್ಷೇತ್ರ ಚಾಮರಾಜನಗರ ಇಲ್ಲಿಯ 27.35 ಎಕರೆ ಜಮೀನಿನಲ್ಲಿ 15 ಎಕರೆ ಜಮೀನನ್ನು ಜಿಲ್ಲಾಧಿಕಾರಿಗಳ ಸಂಕೀರ್ಣ ನಿರ್ಮಾಣಕ್ಕಾಗಿ ನೀಡಲು ಸರ್ಕಾರವು ಆದೇಶ ಸಂ. ಮಾಕೈ 187 ರೇಇವಿ 2000 ದಿನಾಂಕ: 18-9-2001ರಲ್ಲಿ ಆದೇಶ ನೀಡಿದೆ.

(ಈ) 15-00 ಎಕರೆ. ಹಸ್ತಾಂತರ ಪ್ರಕ್ರಿಯೆ ನಡೆಯುತ್ತಿದೆ.

ಮೀನುಗಾರಿಕೆ ಇಲಾಖೆಗೆ ಸರ್ಕಾರದಿಂದ ಬಿಡುಗಡೆಯಾದ ಹಣ.

1235(1102) ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ) :— ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೀನುಗಾರಿಕೆ ಇಲಾಖೆಗೆ ಸರ್ಕಾರವು ಈ ಸಾಲಿನಲ್ಲಿ ಮಂಜೂರು ಮಾಡಿದ ಹಣವೆಷ್ಟು? ಬಿಡುಗಡೆ ಮಾಡಿರುವ ಹಣವೆಷ್ಟು?

ಆ) ಆ ಪೈಕಿ ಚಾಮರಾಜನಗರ ಜಿಲ್ಲೆಗೆ ಮಂಜೂರು ಮಾಡಿದ ಮೊತ್ತವೆಷ್ಟು? (ವಿಧಾನಸಭಾ ಕ್ಷೇತ್ರವಾರು ಯೋಜನೆ ಕಾಮಗಾರಿಗಳ ವಾರು ವಿವರ ಒದಗಿಸುವುದು)

ಇ) ಈ ಕಾಮಗಾರಿ ಯೋಜನೆಗಾಗಿ ರಾಜ್ಯ ಸರ್ಕಾರ ನೀಡಿದ ಹಣ ಹಾಗೂ ಕೇಂದ್ರ ಸರ್ಕಾರದಿಂದ ಬಂದಿರುವ ಹಣ ಎಷ್ಟು?

ಈ) ಅಂದಾಜು ಮೊತ್ತದಲ್ಲಿ ಖರ್ಚು ಮಾಡಿರುವ ಹಣವೆಷ್ಟು? ಯೋಜನೆ-ವಾರು ಉಳಿದಿರುವ ಮೊತ್ತ ಎಷ್ಟು?

ಶ್ರೀ ಬಿ. ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು) :—

ಅ) ಮೀನುಗಾರಿಕೆ ಇಲಾಖೆಗೆ ಸರ್ಕಾರವು ಈ ಸಾಲಿನಲ್ಲಿ ರೂ. 3876.29 ಲಕ್ಷ ಒದಗಿಸಲಾಗಿದೆ. ರೂ. 2981.10 ಲಕ್ಷ ಬಿಡುಗಡೆ ಆಗಿದೆ.

ಆ) ಚಾಮರಾಜನಗರ ಜಿಲ್ಲೆಗೆ ವಿವಿಧ ಯೋಜನೆಗಳಡಿಯಲ್ಲಿ ಮಂಜೂರು ಮಾಡಿದ ತಾಲ್ಲೂಕುವಾರು ಯೋಜನಾವಾರು ಹಣದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. ವಿಧಾನ ಸಭಾ ಕ್ಷೇತ್ರವಾರು ಹಂಚಿಕೆ ಮಾಡಿರುವುದಿಲ್ಲ.

ಇ) ಯೋಜನೆಯಡಿ ಯಾವುದೇ ಕಾಮಗಾರಿ ಸೇರಿಯಿಲ್ಲ. ಹಾಗಾಗಿ ಅನ್ವಯಿಸುವುದಿಲ್ಲ.

ಈ) ಯೋಜನೆಯಡಿ ರೂ. 2.36 ಲಕ್ಷ ಖರ್ಚಾಗಿದ್ದು, ಉಳಿದಿರುವ ಮೊತ್ತ ರೂ. 4.67 ಲಕ್ಷ.

ಅನುಬಂಧ

(ರೂ. ಮೊತ್ತಗಳಲ್ಲಿ)

	ಯೋಜನೆ ಹೆಸರು	ಚಾಮರಾಜನಗರ ತಾಲ್ಲೂಕು	ಯಳಂದೂರು ತಾಲ್ಲೂಕು	ಕೊಳ್ಳೇಗಾಲ ತಾಲ್ಲೂಕು	ಗುಂಡ್ಲುಪೇಟೆ ತಾಲ್ಲೂಕು	ಒಟ್ಟು
	1	2	3	4	5	6
1.	ಮೀನು ಮಾರಾಟಕ್ಕಾಗಿ ಮೀನುಗಾರರಿಗೆ ಸಹಾಯಧನ	2500	2,500	--	2,500	7500
2.	ಮೀನುಗಾರರ ಸಹಕಾರ ಸಂಘಗಳಿಗೆ ಸದಸ್ಯರಾಗಿ ನೋಂದಾಯಿಸಲು ಮಹಿಳಾ ಮೀನುಗಾರರಿಗೆ ಸಹಾಯಧನ	1000	--	--	--	1000
3.	ಮೀನುಮರಿ ಉತ್ಪಾದನಾ ಪಾಲನೆ ಹಾಗೂ ಹಂಚಿಕೆ	100000	35000	35000	100000	270000
4.	ಹುಲ್ಲುಗೆಂಡೆ ಮೀನುಮರಿ ಸರಬರಾಜಿಗೆ ಸಹಾಯಧನ	5000	2000	4000	4000	15000
5.	ವಸ್ತು ಪ್ರದರ್ಶನ	10000	--	--	--	10000
6.	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ	50000	75000	200000	75000	400000
	ಒಟ್ಟು	168500	114500	239000	181500	703500